ಸಾಕ್ಷಿಯನ್ನು ದಿಃ**15.04.2025** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ ಡಿ ಹೆಚ್ ಆರ್ ಪರ ಶ್ರೀ ಎಂ ಇ ಎಂ ವಕೀಲರಿಂದಃ-</u>**

ನನ್ನ ತಂದೆಗೆ ಇಬ್ಬರು ಗಂಡು ಮತ್ತು 4 ಹೆಣ್ಣು ಮಕ್ಕಳು. ಅವರ ಹೆಸರೆಂದರೆ ಯಶೋದಮ್ಮ, ಗೌರಮ್ಮ, ಸಾವಿತ್ರಮ್ಮ, ಗಾಯಿತ್ರಮ್ಮ, ನನ್ನ ಅಣ್ಣ ಮಹದೇವನಾಯ್ಕ ಮತ್ತು ನಾನು. ನನ್ನ ಅಣ್ಣ ಮೃತಪಟ್ಟಿದ್ದಾರೆ. ನನ್ನ ತಂದೆಯ ಹೆಸರು ಅಣ್ಣಯ್ಯ. ಈಗ ನಾನು ರಾಮನಾಥತುಂಗ ಗ್ರಾಮದಲ್ಲಿ ವಾಸ ಇದ್ದೇನೆ. ರಾಮನಾಥತುಂಗ ಗ್ರಾಮದಲ್ಲಿ ನನಗೆ ವಾಸ ಮಾಡಲು ಮನೆಯಿದೆ ಎಂದರೆ ಇಲ್ಲ. ನಾನು ರಾಮನಾಥತುಂಗ ಗ್ರಾಮದಲ್ಲಿ ಬಾಡಿಗೆ ಮನೆಯಲ್ಲಿ ವಾಸ ಇದ್ದೇನೆ. ನಾನು ನನ್ನ ಸಂಬಂಧಿಯಾದ ಚಿಕ್ಕೀರಯ್ಯ ಎಂಬುವವರ ಮನೆಯಲ್ಲಿ ಬಾಡಿಗೆಗೆ ವಾಸ ಇದ್ದೇನೆ. ರಾಮನಾಥತುಂಗ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನನ್ನ ಹೆಸರಿನಲ್ಲಿ ಮನೆ ಇಲ್ಲ. ನನ್ನ ಪತ್ನಿಯ ಹೆಸರಿಗೆ ಸದರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮನೆ ಮಂಜೂರಾಗಿದ್ದು, ನಾನು ಅಲ್ಲಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಕೆಎ-45-ಇ-6875 ಸಿಟಿ-100 ಬಜಾಜ್ ಸ್ಕೂಟರ್ ನ ಆರ್ ಸಿ ಮಾಲೀಕ ನಾನು ಎಂದರೆ ಸರಿ. ಜಯಮ್ಮ ಕೋಂ ಅಣ್ಣಯ್ಯ ಯಾರು ಎಂದು ಗೊತ್ತಿಲ್ಲ. ನನ್ನ ಹೆಸರಿನಲ್ಲಿದ್ದ ಆಸ್ತಿಯನ್ನು ಪರಿಹಾರ ನೀಡಬೇಕಾಗುತ್ತದೆಂದು ಬೇರೆಯವರ ಹೆಸರಿಗೆ ವರ್ಗಾವಣೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಇಬ್ಬರು ಗಂಡು ಮಕ್ಕಳು. ಒಬ್ಬನಿಗೆ 12 ವರ್ಷ ಮತ್ತು ಒಬ್ಬನಿಗೆ 10 ವರ್ಷ. ನಾನು ಮತ್ತು ನಾನು ಪತ್ನಿ ಕೂಲಿ ಕೆಲಸ ಮಾಡುತ್ತೇವೆ. ನನಗೆ ರಾಮನಾಥತುಂಗ ಗ್ರಾಮದಲ್ಲಿ ವಾಸಕ್ಕೆ ಮನೆಯಿದ್ದರೂ ಕೂಡ ಮನೆಯಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಾಡಿಗೆ ಮನೆಯಲ್ಲಿ ವಾಸಯಿದ್ದೇನೆಂದು ತೋರಿಸಲು ದಾಖಲೆ ಕೇಳದೇ ಇರುವುದರಿಂದ ಹಾಜರುಪಡಿಸಿಲ್ಲ.

ಅರ್ಜಿದಾರರಿಗೆ ಪರಿಹಾರದ ಹಣ ಕೊಡಬೇಕಾಗುತ್ತದೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪರಿಹಾರದ ಹಣ ಕೊಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.